ಗಮನಸೆಳೆದಿದ್ದರಷ್ಟೆ. ದಕ್ಷಿಣ ಆಫ್ರಿಕಾ ವಿರುದ್ಧ ಇತ್ತೀಚೆಗೆ ನಡೆದ ಎರಡು ಟೆಸ್ಟ್ ಪಂದ್ಯಗಳಲ್ಲಿ ಅವರು ತಂಡವನ್ನು ಮುನ್ನಡೆಸಿದ್ದರು. ಅದರಲ್ಲಿ ಅವರ ಚುರುಕುತನ ಕಂಡು ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಶಮಿ ಸಿಲ್ವಾ ಕರಗಿಹೋಗಿದ್ದಾರೆ. ಏಂಜೆಲೋ ಮ್ಯಾಥ್ಯೂಸ್, ತಿಸಾರಾ ಪೆರೆರಾ, ಲಾಸಿತ್ ಮಲಿಂಗ, ಸುರಂಗ ಲಕ್ಮಲ್ ತರಹದ ಪಳಗಿದ ಆಕೃತಿಗಳನ್ನು ಇಟ್ಟುಕೊಂಡು ಶ್ರೀಲಂಕಾ ಕ್ರಿಕೆಟ್‌ಗೆ ಹೋರಾಟದ ಇಂಧನವಾಗುವ ದೊಡ್ಡ ಸವಾಲು ಹೊಸ ನಾಯಕನ ಮೇಲಿದೆ. ನಾಲ್ಕು ವರ್ಷ ಏಕದಿನ ಪಂದ್ಯವನ್ನೇ ಆಡದ ಕ್ರಿಕೆಟಿಗನ ಭುಜದ ಮೇಲೆ ಈ ನೊಗದ ಭಾರ ಹೆಚ್ಚೇ ಅಲ್ಲವೇ?

ಕಳೆದ ವಿಶ್ವಕಪ್ ಕ್ರಿಕೆಟ್‌ನಲ್ಲಿ ಗುಂಪು ಹಂತವನ್ನು ದಾಟುವ ಮೂಲಕ ವಿಶ್ವವನ್ನೇ ಬೆರಗುಗೊಳಿಸಿದ್ದ ತಂಡ ಬಾಂಗ್ಲಾದೇಶ. 2017ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಸೆಮಿಫೈನಲ್ಸ್ ಪ್ರವೇಶಿಸಿ ಎಲ್ಲರ ಹುಬ್ಬೇರುವಂತೆ ಮಾಡಿದ್ದ ತಂಡವಿದು. ಭಾರತದ ಎದುರು ಹೋದವರ್ಷ ಏಷ್ಯಾ ಕಪ್ ಫೈನಲ್‌ನಲ್ಲಿ ಕೊನೆಯ ಎಸೆತದವರೆಗೆ ಹೋರಾಡಿ ಸೋತ ಪಡೆ.



ಲುಂಗಿ ಗಿಡಿ


ಇಮ್ರಾನ್ ತಾಹಿರ್

'ಕಗಿಸೋ ರಬಾಡಾ, ಡೇಲ್ ಸ್ಟೇನ್, ಲುಂಗಿ ಗಿಡಿ, ಇಮ್ರಾನ್ ತಾಹಿರ್... ಈ ಬೌಲಿಂಗ್ ದಾಳಿ ಬಾಯಲ್ಲಿ ನೀರೂರಿಸುವಷ್ಟು ರುಚಿಕಟ್ಟಾಗಿದೆ' ಎಂದು ಕೆಲವರು ಹೇಳಿರುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಕಳೆದ ಒಂದು ವರ್ಷದ ಅಂಕಿಅಂಶಗಳ ಮೇಲೆ ಕಣ್ಣಾಡಿಸಿದರೆ ಗೊತ್ತಾಗುತ್ತದೆ, ದಕ್ಷಿಣ ಆಫ್ರಿಕಾದ ಬೌಲರ್‌ಗಳ ಸಾಮರ್ಥ್ಯ ಏನು ಎಂದು. ಪ್ರತಿ 27.59 ರನ್‌ಗಳಿಗೆ ಒಂದರಂತೆ ವಿಕೆಟ್‌ಗಳನ್ನು ಕಿತ್ತಿರುವುದಷ್ಟೇ ಅಲ್ಲದೆ ಸತತವಾಗಿ ನಾಲ್ಕು ಏಕದಿನದ ಪಂದ್ಯಗಳ ಸರಣಿಗಳನ್ನು ಗೆದ್ದು ಬೀಗಿರುವ ತಂಡವಿದು.